ಶ್ರೀ ಎಚ್.ಡಿ. ದೇವೇಗೌಡ.—ರಾಜಕಾರಣದಲ್ಲಿರುವವರೆಲ್ಲರ ಮೇಲೆಆಪಾದನೆಗಳಿವೆ. ಇಂಥ ಆಪಾದನೆಗಳಿಂದ ವಿಮುಕ್ತರಾಗುವುದಕ್ಕೆ ನಿಷ್ಪಕ್ಷಪಾತ ವಿಚಾರಣೆ ಆಗುವುದಕ್ಕೆ ಶಾಸಕರಾಗಲೀ, ಮಂತ್ರಿಗಳಾಗಲೀ ಮುಖ್ಯ ಮಂತ್ರಿಗಳಾಗಲೀ, ಮಾಜಿ ಮಂತ್ರಿಗಳಾಗಲೀ ಯಾರೇ ಆಗಿರಲಿ, ಅವಕಾಶವಿರುವಂಥ ಒಂದಂ ಆಯೋಗವನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ?

SRI K.H. PATIL.—That is the mind of the Chief Minister. He has already disclosed it before us and Government is considering that ospeet very carefully.

ALLOTMENT OF HOUSES ON RENTAL BASIS AT RAJAJINAGAR AND WILSON GARDEN

619. SRI M. B. RAMASWAMY (Anekal).—

Will the Minister for Municipal Administration be pleased to state :—

(*a*) the No. of houses allotted to S.Cs./S.Ts. on rental basis at Rajajinagar and Wilson Garden in Bangalore.

(*b*) whether the allotment is made only to N.G.Os. and the conditions of allotment of these house;

(*c*) whether there are any vacant houses at the above places at present ;

(*d*) if so, the number of houses vacant;

(*e*) the number of applications from N G Os. pending disposal for allotment of houses at Rajajinagar and Wilson Garden.

(*f*) whether there are any complaints against the D.S. who is in charge of house allotments if so the action taken by the Government in the matter?

SRI B. BASAVALINGAPPA (Minister for Municipal Administration).—

(*a*) 67 quarters at Rajajinagar.
52 quarters at Wilson Garden.

Total ... 119

(*b*) Yes.
(*i*) Salary of the officials should not exceed Rs. 620 p.m.
(*ii*) The official should not own a house in Bangalore City.

(*c*) No.

(*d*) Does not arise in view of reply to (*c*).

(*e*) 450.

(*f*) No. Action by Government does not arise.

ಶ್ರೀ ಎಂ.ಬಿ. ರಾಮುಸ್ವಾಮಿ.—ಪ್ರಶ್ನೆಯ (೩) ಭಾಗಕ್ಕೆ ಉತ್ತರವಾಗಿ ೪೫೦ ಪೆಂಡಿಂಗ್‌ನಲ್ಲಿವೆ ಎಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ನಾನ್ ಗೆಜೆಟೆಡ್ ನೌಕರರು ಮನೆಗಳಿಲ್ಲದೆ ಕಷ್ಟ ದಿಂದಿರುವ ಸಮಯದಲ್ಲಿ ೪೫೦ ಮನೆಗಳು ವೇಕೆಂಟ್ ಆಗಿ ಇರುವುದಕ್ಕೆ ಕಾರಣವೇನು? ಎಷ್ಟು ದಿವಸದಿಂದ ವೇಕೆಂಟ್ ಆಗಿವೆ.

† ಶ್ರೀ ಬಿ. ಬಸವಲಿಂಗಪ್ಪ —ಮನೆಗಳು ಖಾಲಿ ಇಲ್ಲ, ೪೫೦ ಅರ್ಜಿಗಳು ಪೆಂಡಿಂಗ್‌ನಲ್ಲಿವೆ.

ಶ್ರೀ ಎಂ.ಬಿ. ರಾಮುಸ್ವಾಮಿ.—ವಿಲ್ಸನ್ ಗಾರ್ಡನ್ ಮತ್ತು ರಾಜಾಜಿನಗರದಲ್ಲಿ ರೆಂಟಲ್ ಬೇಸಿಸ್ ಮೇಲೆ ಮನೆಗಳನ್ನು ಕೊಡುವಾಗ ಗೆಜೆಟೆಡ್ ಹುದ್ದೆಯಲ್ಲಿರುವ ಅಧಿಕಾರಿಗಳು ಅವರಿಗೆ ಮನೆ ಇದ್ದರೂ ಸಹ ಆ ಮನೆಗಳನ್ನು ಬಾಡಿಗೆಗೆ ಕೊಟ್ಟು ಬಡವರಿಗಾಗಿ ಅಲಾಟ ಆಗತಕ್ಕ ಮನೆಗಳಲ್ಲಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ. —ಸುದ್ದಿ ನನ್ನ ಕಿವಿ ಮೇಲೆ ಬಿದ್ದಿದೆ. ಆದರ ಬಗ್ಗೆ ಸೂಕ್ತವಾಗಿ ತನಿಖೆ ಮಾಡಿ ನ್ಯಾಯವಾಗಿ, ರೂಲ್ಸ್ ಪ್ರಕಾರ ಹೇಗೆ ಸರ್ಕಾರಿ ನೌಕರರಿಗೆ ಕೊಡಬೇಕೋ ಆ ರೀತಿ ಕೊಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ರಾಜಾಜಿನಗರ ಮತ್ತು ವಿಲ್ಸನ್ ಗಾರ್ಡನ್‌ನಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗಿವೆ ? ಅದರಲ್ಲಿ ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್‌ನವರಿಗೆ ಯಾವ ಪ್ರಮಾಣದಲ್ಲಿ ಕೊಡಬೇಕೋ ಆ ಪ್ರಮಾಣದಲ್ಲಿ ಕೊಡಲಾಗಿದೆಯೇ ? ಇಲ್ಲದೆ ಇದ್ದರೆ ಅವರಿಗೆ ನ್ಯಾಯ ದೊರಕಿಸಿ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ —೫೭೬ ಮನೆಗಳನ್ನು ಕಟ್ಟಲಾಗಿದೆ. ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸುತ್ತೇನೆ.

. SRI H.S. SIDDAPPA.—If the houses are still vacant in these two places Rajajina ar and Wilson Garden-will you consider and allot some houses to ex-s rvicemen ?

ಶ್ರೀ ಬಿ. ಬಸವಲಿಂಗಪ್ಪ.—ಖಾಲಿ ಇರುವ ಮನೆಗಳು ಯಾವುವೂ ಇಲ್ಲ. ೪೫೦ ಅರ್ಜಿಗಳು ಕಾಯುತ್ತಿವೆ, ಕ್ಯೂನಲ್ಲಿವೆ. ಒಂದು ವಿಷಯವನ್ನು ಮಾನ್ಯ ಸದಸ್ಯರಿಗೆ ಹೇಳಬೇಕು. ಸರ್ಕಾರಿ ಕೆಲಸದಲ್ಲಿರುವವರ ಕುಂದುಕೊರತೆಗಳು ಸರ್ಕಾರದ ಗಮನಕ್ಕೆ ಬಂದಿವೆ. ಮತ್ತೆ ಹೌಸಿಂಗ್ ಎಸ್ಟೇಟ್ ಮಾಡಬೇಕು ಎನ್ನುವ ವಿಷಯ ಸರ್ಕಾರದವರ ಪರಿಶೀಲನೆಯಲ್ಲಿದೆ. ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಂಡ ಕೂಡಲೇ ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್.—ರಾಜಾಜಿನಗರ ಮತ್ತು ವಿಲ್ಸನ್ ಗಾರ್ಡನ್ಸ್‌ನಲ್ಲಿ ಕಟ್ಟಿರತಕ್ಕ ವಾಸದ ಗೃಹಗಳನ್ನು ಸರ್ಕಾರಿ ಉದ್ಯೋಗಸ್ಥರಿಗೆ ಕೊಡತಕ್ಕದ್ದು. ಇವುಗಳಲ್ಲಿ ೧೮ ಪರ್ಸೆಂಟನ್ನು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಗಳಿಗೆ ಕೊಡಬೇಕೆಂದು ಸರ್ಕಾರದ ನೀತಿ ಇದೆ. ಈ ಮನೆಗಳನ್ನು ಅಲಾಟ್ ಮಾಡಿರುವ ಸಮಿತಿ ಆ ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಿದೆಯೇ? ಇವರ ಪರ್ಸೆಂಟೇಜ್ ಸರಿಪಡಿಸುವುದಕ್ಕೆ ಅವಕಾಶ ಮಾಡುವುದು ಮುಖ್ಯವಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಈ ಸಮಿತಿ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದರ ಬಗ್ಗೆ ನಾನು ಕೈ ಹಾಕಿಲ್ಲ. ಶೀಘ್ರದರ್ಶಿಯೇ ಅದರ ತನಿಖೆ ಮಾಡುತ್ತೇನೆ ಮತ್ತು ಮಾನ್ಯ ಸದಸ್ಯರು ಏನು ೧೮ ಪರ್ಸೆಂಟ್ ಇರಬೇಕೆಂದು ಹೇಳುತ್ತಾರೆ ಅದಕ್ಕಿಂತ ಹೆಚ್ಚಾದರೂ ಚಿಂತೆ ಇಲ್ಲ, ಬಡವರಿಗೆ, ಮನೆ ಇಲ್ಲದೆ ಇರುವವರಿಗೆ ಮನೆ ಕೊಡಬೇಕು ಎಂಬ ಉದ್ದೇಶ ಸರ್ಕಾರಕ್ಕೆ ಇದೆ. ಹರಿಜನರಿಗೆ ಬೇರೆ ಕಡೆ ಮನೆಗಳು ಸಿಕ್ಕುತ್ತಿಲ್ಲ ಎಂದು ಎಲ್ಲ ಸದಸ್ಯರ ಗಮನದಲ್ಲಿಯೂ ಇರುವುದರಿಂದ ಜಾಸ್ತಿ ಕೊಟ್ಟರೂ ತಪ್ಪಾಗುವುದಿಲ್ಲ. ಆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇನೆ.

ಶ್ರೀ ಎಂ.ಬಿ. ರಾಮುಸ್ವಾಮಿ.—ಮನೆಗಳನ್ನು ಅಲಾಟ ಮಾಡುವಾಗ ಯಾರೇ ಬಡವರಾಗಿರಲಿ, ಎಸ್.ಜಿ.ಓ. ಆದರೂ ನಿಜವಾಗಿ ಯೊಕೆಗ್ಯತೆ ಇದ್ದು, ಮನೆಯಿಲ್ಲ ಎನ್ನತಕ್ಕ ವಿಚಾರದಲ್ಲಿ ಪರಿಶೀಲನೆ ಮಾಡಿ ಮನೆಗಳನ್ನು ಕೊಡಬೇಕು. ಅದು ಬಿಟ್ಟು ಮೂರು ನಾಲ್ಕು ವರ್ಷದಿಂದ ಅರ್ಜಿ ಹಾಕಿದರೂ ಸಹ ಅಂಥವರನ್ನು ಬಿಟ್ಟು ನೆನ್ನೆ ಮೊನ್ನೆ ಅರ್ಜಿ ಕೊಟ್ಟವರಿಗೆ ಮನೆ ಕೊಡುತ್ತಿದ್ದಾರೆ. ಇದನ್ನು ತಪ್ಪಿಸಿ, ಇವ್ಯ ಆವಧಿಯಲ್ಲಾದರೂ ಈ ಕಮಿಟಿಯನ್ನು ಬದಲಾವಣೆ ಮಾಡಿ, ಎಲ್ಲ ಬಡ ಎಸ್.ಜಿ.ಓ. ಗಳಿಗೂ ಮನೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ – ಮಾನ್ಯ ಸದಸ್ಯರ ಸಲಹೆ ಸ್ವಾಗತಾರ್ಹವಾದುದು. ಈ ಕಮಿಟಿ ಬಹಳ ದಿವಸಗಳಿಂದ ಇದೆ. ಅದನ್ನು ಪುನರ್ಘಟನೆ ಮಾಡಿ ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ಕಾರ್ಯಗತ ಮಾಡುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ.—ಅನೇಕರು ಮನೆಗಳನ್ನು ತೆಗೆದುಕೊಂಡು ಅದನ್ನು ಸಬ್ ಲೀಸ್ ಮಾಡಿದ್ದಾರೆ. ಅಂಥವರನ್ನು ಎವಿಕ್ಟ್ ಮಾಡಿ ನಿಜವಾದ ಬಡವರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ರೂಲ್ಸ್‌ಗೆ ವಿರೋಧವಾಗಿ ಏನಾದರೂ ಇದ್ದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

TERMINATION OF THE SERVICES OF SOME TEACHERS IN GULBARGA.

2—00 P.M

390. SRI BAPU GOWDA RAYAPPA (Shahapur).—

Will the Minister for Education be pleased to state :—

(*a*) Whether in the months of July and August 1971, the Deputy Director of Education, Gulbarga, had recruited some persons for the posts of teachers in Gulbarga Division ;

(*b*) If so, the number of persons recruited ;

(*c*) Whether the services of these teachers have now been terminated ;

(*d*) If so, the reasons for the same and the action taken to reinstate them ?

SRI A. R. BADARINARAYANA (Minister for Education).—

(*a*) Yes in his District.

(*b*) 383.

(*c*) Yes.

(*d*) As they were local candidates appointed purely on temporary basis, they have been terminated. They have to seek their chances when the District Recruitment Committee calls for applications.

SRI BAPU GOWDA RAYAPPA.—I wish to know whether these recruited candidates have been taken to duty this year. ?

† ಶ್ರೀ ಎ. ಆರ್. ಬದರೀನಾರಾಯಣ್.—ರೆಕ್ರೂಟ್‌ಮೆಂಟ್ ಕಮಿಟಿ ಸೆಲೆಕ್ಷನ್ ಆಗುವವರೆಗೆ ಯಾರಾನ್ನಾದರೂ ನೇಮಕ ಮಾಡಿಕೊಳ್ಳಬೇಕು. ಅದಕ್ಕೆ ಕೆಲವರನ್ನು ಅಪಾಯಿಂಟ್ ಮಾಡಿರಬಹುದು.

SRI BAPU GOWDA RAYAPPA.—These candidates have been taken by the Deputy Director in 1971-72. Again they have been called for interview. I wish to know whether it is necessary to interview them again ?